ನಂ. ಎಲ್.ಎನ್.ಡಿ (1) 331:06-07

ಜಿಲ್ಲೆಯ ಎಲ್ಲಾ ಉಪವಿಭಾಗಾಧಿಕಾರಿಗಳು ಹಾಗೂ ತಹಸಿಲ್ದಾರರವರಿಗೆ ಸರ್ಕಾರದ ಸುತ್ತೋಲೆಯನ್ನು ಪರಿಶೀಲಿಸಿ ಕ್ರಮಕೈಗೊಳ್ಳಲು ತಿಳಿಸಿದೆ.

ಜಿಲ್ಲಾಧಿಕಾರಿಗಳ ಪರವಾಗಿ,
ಹಾಸನ ಜಿಲ್ಲೆ, ಹಾಸನ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಆರ್‌ಡಿ 83 ಎಲ್‌ಜಿಪಿ 2006

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 05.01.2007.

**ಸುತ್ತೋಲೆ**

ವಿಷಯ: ಗೋಮಾಳ ಜಮೀನನ್ನು ಮಂಜೂರು ಮಾಡುವ ಬಗ್ಗೆ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಮೇಲ್ಮನವಿ ಸಂಖ್ಯೆ:1353/06, ದಿ:18.11.06ರಂದು ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ಪರಿಷ್ಕೃತ ಸೂಚನೆಗಳನ್ನು ಹೊರಡಿಸುವ ಬಗ್ಗೆ.

*******

ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 14048/05ರಲ್ಲಿ ದಿ:22.09.05 ರಂದು ತೀರ್ಪನ್ನು ನೀಡಿ ರಾಜ್ಯದಲ್ಲಿ ಯಾವುದೇ ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನುಗಳನ್ನು ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ ಮಂಜೂರು ಮಾಡದೆ ಅವುಗಳನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗತಕ್ಕದ್ದು ಮತ್ತು ಅಂತಹ ಜಮೀನುಗಳಲ್ಲಿ ಅನಧಿಕೃತ ಸಾಗುವಳಿ ಮುಂದುವರಿಸಬಾರದೆಂದು ಹಾಗೂ ಈ ಜಮೀನುಗಳನ್ನು ಗ್ರಾಮೀಣ ಸಮುದಾಯದ ಸಾರ್ವಜನಿಕ ಉಪಯೋಗಕ್ಕಾಗಿ ಮೀಸಲಿಡಬೇಕೆಂದು ನಿರ್ದೇಶನವನ್ನು ನೀಡಿತ್ತು. ಗೌರವಾನ್ವಿತ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಅಗತ್ಯ ಸೂಚನೆಗಳನ್ನು ಸುತ್ತೋಲೆ ಸಂಖ್ಯೆ: ಕಂಇ 74 ಎಲ್‌ಜಿಪಿ 2005, ದಿ:24.12.05ರಲ್ಲಿ ನೀಡಲಾಗಿತ್ತು.

ಈ ತೀರ್ಪಿನ ವಿರುದ್ಧ ಸಲ್ಲಿಸಿದ ರಿಟ್ ಅಪೀಲು ಸಂಖ್ಯೆ: 1353/06 (ಕೆಎಲ್‌ಆರ್-ಆರ್‌ಇಎಸ್), ರಿಟ್ ಅರ್ಜಿ ಸಂಖ್ಯೆ: 3813/05 (ಕೆಎಲ್‌ಆರ್-ಆರ್‌ಇಎಸ್) ಮತ್ತು ರಿಟ್ ಅರ್ಜಿ ಸಂಖ್ಯೆ: 21221/05 (ಕೆಎಲ್‌ಆರ್-ಎಲ್‌ಜಿ)ರಲ್ಲಿ ದಿ:18.11.06ರಂದು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ನೀಡಿದ ತೀರ್ಪಿನಲ್ಲಿ ದಿ:22.09.05 ರಂದು ಏಕಸದಸ್ಯ ಪೀಠ ನೀಡಿದ ತೀರ್ಪನ್ನು ರದ್ದುಗೊಳಿಸಿದೆ. ವಿಭಾಗೀಯ ಪೀಠ ನೀಡಿದ ತೀರ್ಪಿನ ಮುಖ್ಯ ಅಂಶಗಳು ಈ ಕೆಳಕಂಡಂತಿವೆ.

1) The Deputy Commissioners in the State are directed to identify all the Gomal and other reserved lands, consider whether their extent have to be retained or reduced or totally diverted to other purposes based upon the cattle population and the requirement which the reservation made still exists in the concerned areas.

2) If any gomal land or other reserved lands is not required in the changed circumstances on account of subsequent events, de-reserve the same for consideration of regularization under section 94A, 94B and 94C of the Act keeping in view the eligibility of unauthorized occupants for regularization of their occupation in the respective areas of the state.

ಕರ್ನಾಟಕ ಭೂ ಕಂದಾಯ ನಿಯಮಾವಳಿಗಳು 1966ರ ನಿಯಮ 97(1) ರಂತೆ ಪ್ರತಿಯೊಂದು ಗ್ರಾಮದಲ್ಲಿ ಪ್ರತಿ 100 ಜಾನುವಾರುಗಳಿಗೆ 12 ಹೆಕ್ಟೇರ್ ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನನ್ನು ಮೇವಿಗಾಗಿ ಕಾಯ್ದಿರಿಸಬೇಕಾಗಿರುತ್ತದೆ. ಮುಂದುವರೆದು ಇದೇ ನಿಯಮಾವಳಿಗಳ ನಿಯಮ 97(4)ರ ರೀತ್ಯ ನಿಯಮ 97(1)ರಲ್ಲಿ ತಿಳಿಸಿರುವ ವಿಸ್ತೀರ್ಣಕ್ಕಿಂತ ಹೆಚ್ಚುವರಿ ಜಮೀನನ್ನು ವಿರಹಿತಗೊಳಿಸಲು ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಳ್ಳಬಹುದು. ಆದರೆ ಈ ಕನಿಷ್ಠಕ್ಕಿಂತ ವಿರಹಿತಗೊಳಿಸಲು ಜಿಲ್ಲಾಧಿಕಾರಿಗಳಿಗೆ ಅವಕಾಶ ನೀಡಲಾಗಿಲ್ಲ. ಈಗ ಗೌರವಾನ್ವಿತ ಉಚ್ಛ ನ್ಯಾಯಾಲಯವು ಮೇಲಿನ ಮೇಲ್ಮನವಿಯಲ್ಲಿ ನೀಡಿರುವ ತೀರ್ಪಿನಂತೆ ನಿಯಮ 97(1)ರಲ್ಲಿ ನಿರ್ದಿಷ್ಟ ಪಡಿಸಿದ ವಿಸ್ತೀರ್ಣಕ್ಕಿಂತ ಹೆಚ್ಚು ಜಮೀನು ಲಭ್ಯವಿದ್ದಲ್ಲಿ ಮಾತ್ರ ಅದನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 94ಎ, 94ಬಿ ಮತ್ತು 94ಸಿ ರೀತ್ಯ ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡಿರುವವರಿಗೆ ಸಕ್ರಮಗೊಳಿಸಲು ಅವಕಾಶವಿರುತ್ತದೆ. ಈ ಗೋಮಾಳದ ಜಮೀನಿನ ವಿಸ್ತೀರ್ಣ ಮೇಲೆ ತಿಳಿಸಿದ ನಿಯಮ 97(1)ರಲ್ಲಿ ನಿರ್ದಿಷ್ಟ ಪಡಿಸಿದ ವಿಸ್ತೀರ್ಣಕ್ಕಿಂತ ಕಡಿಮೆ ಇದ್ದರೆ, ಅಂತಹ ಸಂದರ್ಭದಲ್ಲಿ ಆ ಜಮೀನನ್ನು ಒತ್ತುವರಿ ಮಾಡಿ ಅನಧಿಕೃತವಾಗಿ ಸ್ವಾಧೀನದಲ್ಲಿರುವ ವ್ಯಕ್ತಿಗಳಿಗೆ ಸಕ್ರಮಗೊಳಿಸಲು ಅವಕಾಶವಾಗುವುದಿಲ್ಲ. ಆದ್ದರಿಂದ ಸರ್ಕಾರವು ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯ ಮೇಲೆ ತಿಳಿಸಿದ ಮೇಲ್ಮನವಿಯ ತೀರ್ಪಿನ ಹಿನ್ನಲೆಯಲ್ಲಿ ಈ ಹಿಂದೆ ಸರ್ಕಾರ ಹೊರಡಿಸಿದ ಸುತ್ತೋಲೆ ಸಂಖ್ಯೆ: ಕಂಇ 74 ಎಲ್‌ಜಿಪಿ 2005, ದಿ:24.12.05ನ್ನು ಪರಿಷ್ಕೃತಗೊಳಿಸಿ ಈ ಕೆಳಕಂಡಂತೆ ಸೂಚನೆಗಳನ್ನು ನೀಡಿದೆ.

1) ಎಲ್ಲಾ ಜಿಲ್ಲಾಧಿಕಾರಿಗಳು ರಾಜ್ಯದಲ್ಲಿನ ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನನ್ನು ಗುರುತಿಸಿ ಆ ಜಮೀನುಗಳ ವಿಸ್ತೀರ್ಣವು ಕರ್ನಾಟಕ ಭೂ ಕಂದಾಯ ನಿಯಮಾವಳಿಗಳ ನಿಯಮ 97(1)ರಲ್ಲಿ ನಿರ್ದಿಷ್ಟ ಪಡಿಸಿರುವ ವಿಸ್ತೀರ್ಣಕ್ಕಿಂತ ಕಡಿಮೆ ಆಗಿದೆಯೇ ಎಂಬುದನ್ನು ಹಾಗೂ ಜಾನುವಾರುಗಳ ಸಂಖ್ಯೆಗಳ ಅನುಸಾರ ಆ ವಿಸ್ತೀರ್ಣವನ್ನು ಉಳಿಸಿಕೊಳ್ಳುವ ಅವಶ್ಯಕತೆ ಇದೆಯೇ ಎಂಬುದನ್ನು ಪರಿಶೀಲಿಸುವುದು.

2) ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನುಗಳ ವಿಸ್ತೀರ್ಣವು ಕರ್ನಾಟಕ ಭೂ ಕಂದಾಯ ನಿಯಮಾವಳಿಗಳ ನಿಯಮ 97(1)ಕ್ಕಿಂತ ಮೀರಿದ ಪ್ರಕರಣಗಳಲ್ಲಿ ಮಾತ್ರ ಆ ಜಮೀನಿನಲ್ಲಿ ಯಾರಾದರೂ ಅಕ್ರಮವಾಗಿ ಸಾಗುವಳಿ ಮಾಡಿಕೊಂಡು ಸ್ವಾಧೀನದಲ್ಲಿದ್ದು, ಅವರು ಸದರಿ ಜಮೀನನು ಪಡೆಯಲು ಅರ್ಹರಾಗಿದ್ದು ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 94ಎ, 94ಬಿ ಮತ್ತು 94ಸಿ ರಡಿಯಲ್ಲಿ ನಿಗಧಿತ ಅವಧಿಯಲ್ಲಿ ಜಮೀನಿನ ಸಕ್ರಮೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಅವುಗಳನ್ನು ಸಕ್ರಮಗೊಳಿಸಲು ಸೂಕ್ತ ನಿರ್ಧಾರಕ್ಕಾಗಿ ಸರ್ಕಾರ ರಚಿಸಿರುವ/ರಚಿಸುವ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಇಡತಕ್ಕದ್ದು.

3) ಯಾವುದೇ ಪ್ರಕರಣದಲ್ಲಿ ಗೋಮಾಳ ಜಮೀನಿನ ವಿಸ್ತೀರ್ಣ ಕರ್ನಾಟಕ ಭೂ ಕಂದಾಯ ನಿಯಮಾವಳಿಗಳ ನಿಯಮ 97(1)ಕ್ಕಿಂತ ಕಡಿಮೆ ಇದ್ದಲ್ಲಿ ಅವುಗಳು ಒತ್ತುವರಿ ಆಗಿದ್ದರೂ ಸಹಾ ಸಕ್ರಮಗೊಳಿಸಲು ಯಾವುದೇ ಕ್ರಮವನ್ನಾಗಲಿ ಅಥವಾ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಇಡುವ ಕ್ರಮವನ್ನಾಗಲಿ ತೆಗೆದುಕೊಳ್ಳಬಾರದು.

4) ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನುಗಳನ್ನು ಯಾವುದೇ ಖಾಸಗಿ ಸಂಸ್ಥೆಗಾಗಲಿ, ಖಾಸಗಿ ವ್ಯಕ್ತಿಗಾಗಲಿ ಅಥವಾ ಖಾಸಗಿ ಗಣಿಗಾರಿಕೆ ಉದ್ದೇಶಕ್ಕಾಗಲಿ ಮಂಜೂರು ಮಾಡಬಾರದು ಮತ್ತು ಇಂತಹ ಜಮೀನುಗಳು ಖಾಲಿ ಇದ್ದು ಸಕ್ರಮೀಕರಣಕ್ಕಾಗಿ ಯಾವುದೇ ಅರ್ಜಿ ಬಾಕಿ ಇಲ್ಲದಿದ್ದಲ್ಲಿ ಅಂತಹ ಜಮೀನುಗಳನ್ನು ಗ್ರಾಮೀಣ ಸಮುದಾಯದ ಸಾರ್ವಜನಿಕ ಉದ್ದೇಶಕ್ಕೆ ಮೀಸಲಿರಿಸತಕ್ಕದು.

(ಎಸ್.ಎಮ್.ಜಾಮ್‌ದಾರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ.

ಇವರಿಗೆ,

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಬೆಳಗಾಂ/ಗುಲ್ಬರ್ಗಾ/ಮೈಸೂರು ವಿಭಾಗ.
2. ಎಲ್ಲಾ ಜಿಲ್ಲಾಧಿಕಾರಿಗಳು.
3. ಎಲ್ಲಾ ಉಪ ವಿಭಾಗಾಧಿಕಾರಿಗಳು. } ಜಿಲ್ಲಾಧಿಕಾರಿಗಳ ಮೂಲಕ.
4. ಎಲ್ಲಾ ತಹಶೀಲ್ದಾರರುಗಳು. }

ಪ್ರತಿ:

1) ಸರ್ಕಾರದ ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ(ಭೂ ಮಂಜೂರಾತಿ).
2) ಸರ್ಕಾರದ ಅಧೀನ ಕಾರ್ಯದರ್ಶಿಗಳು (ಭೂ ಮಂಜೂರಾತಿ 1-2)
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ.
4) ಹೆಚ್ಚುವರಿ ಪ್ರತಿಗಳು.